## ಕರ್ನಾಟಕ ಸರ್ಕಾರ

## ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1206

ಸದಸ್ಯರ ಹೆಸರು : ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾಗಿದ್ದ ದಿನಾಂಕ : 16-03-2021

| ಕ್ರ.ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ | ಕಾರವಾರ ಜಿಲ್ಲೆಯಲ್ಲಿ ಇರುವ ಸಾರ್ವಜನಿಕ ಉದ್ದಿಮೆಗಳೆಷ್ಟು; ಅವು ಯಾವುವು; ಅವುಗಳನ್ನು ನಿಯಂತ್ರಿಸುವ ಆಡಳಿತ ಇಲಾಖೆಗಳಾವುವು;(ವಿವರವಾಗಿ ಆಡಳಿತ ಇಲಾಖಾವಾರು ಮಾಹಿತಿ ನೀಡುವುದು) | ಕಾರವಾರ ಜಿಲ್ಲೆಯಲ್ಲಿ ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ವ್ಯಾಪ್ತಿಯಲ್ಲಿರುವ 60 ಸಾರ್ವಜನಿಕ ಉದ್ದಿಮೆಗಳಲ್ಲಿ ಯಾವುದೇ ಸಾರ್ವಜನಿಕ ಉದ್ದಿಮೆ ಇರುವುದಿಲ್ಲ. |
| ಆ | Corporate Social Responsible Fund ಅಂದರೇನು; ಇದು ಯಾವ ಉದ್ಯಮಗಳಿಗೆ ಅನ್ವಯಿಸುತ್ತದೆ; ಇದರ ಸಂಬಂಧ ಇರುವ ಮಾರ್ಗಸೂಚಿಗಳೇನು; (ವಿವರವಾದ ಮಾಹಿತಿ ನೀಡುವುದು) | ಕಂಪನಿ ಕಾಯ್ದೆ, 2013ರ ಕಲಂ 135 ರ ಪ್ರಕಾರ ಕಾಯ್ದೆಯ ಅನುಸೂಚಿ-7 ರಲ್ಲಿ ವಿವರಿಸಿರುವ ಕಾರ್ಯಕ್ರಮಗಳಿಗೆ, ಪ್ರತಿ ಆರ್ಥಿಕ ವರ್ಷದಲ್ಲಿ, ಹಿಂದಿನ ಮೂರು ಆರ್ಥಿಕ ವರ್ಷದಲ್ಲಿ ಗಳಿಸಿದ ಸರಾಸರಿ ನಿವ್ವಳ ಲಾಭದ ಕನಿಷ್ಠ ಶೇ.2 ರಷ್ಟು ಮೊತ್ತವನ್ನು ವಿನಿಯೋಗಿಸಲು ಕಾಯ್ದಿರಿಸಿರುವ ಮೊತ್ತವನ್ನು Corporate Social Responsibility Fund ಎಂದು ವ್ಯಾಖ್ಯಾನಿಸಲಾಗಿದೆ.<br>ಒಂದು ಆರ್ಥಿಕ ವರ್ಷದಲ್ಲಿ, ರೂ.ಐದು ನೂರು ಕೋಟಿಗಳ ಅಥವಾ ಅದಕ್ಕಿಂತ ಹೆಚ್ಚಿನ ನಿವ್ವಳ ಮೌಲ್ಯವನ್ನು ಹೊಂದಿರುವ ಅಥವಾ ಒಂದು ಸಾವಿರ ಕೋಟಿ ಅಥವಾ ಅದಕ್ಕಿಂತ ಹೆಚ್ಚಿನ ವಹಿವಾಟು ಅಥವಾ ಐದು ಕೋಟಿ ಅಥವಾ ಅದಕ್ಕಿಂತ ಹೆಚ್ಚಿನ ನಿವ್ವಳ ಲಾಭ ಗಳಿಸಿರುವ ಸಾರ್ವಜನಿಕ ಉದ್ದಿಮೆಗಳಿಗೆ ಇದು ಅನ್ವಯಿಸುತ್ತದೆ.<br>CSR ಅನುದಾನದ ನಿರ್ವಹಣೆ ಬಗ್ಗೆ ಕೇಂದ್ರ ಸರ್ಕಾರವು Companies (Corporate Social Responsibility Policy) Rules, 2014 ನ್ನು ರೂಪಿಸಿದೆ. |

| | | |
|---|---|---|
| ಇ | ಕಳೆದ 3 ವರ್ಷಗಳಲ್ಲಿ ಕಾರವಾರ ಜಿಲ್ಲೆಯಲ್ಲಿ ಸ್ಥಾಪನೆಗೊಂಡ ಸಾರ್ವಜನಿಕ ಉದ್ದಿಮೆಗಳು ಯಾವುವು; Corporate Social Responsible Fund ನಿಧಿಯಡಿ ಎಷ್ಟು ಹಣವನ್ನು ಕ್ರೋಢೀಕರಿಸಿವೆ;(ವರ್ಷವಾರು, ಉದ್ದಿಮೆವಾರು ಮಾಹಿತಿ ನೀಡುವುದು) | - ಉದ್ಭವಿಸುವುದಿಲ್ಲ - |
| ಈ | ಕಳೆದ 3 ವರ್ಷಗಳಲ್ಲಿ ಈ ಕ್ರೋಢೀಕರಿಸಲಾದ ಅನುದಾನದಲ್ಲಿ ಸದರಿ ಉದ್ದಿಮೆಗಳು ಯಾವ ಯಾವ ಕಾಮಗಾರಿಗಳಿಗೆ ಎಷ್ಟು ಹಣವನ್ನು, ಯಾವ ಏಜೆನ್ಸಿ ಮೂಲಕ ಬಿಡುಗಡೆ ಮಾಡಿದೆ ; (ವರ್ಷವಾರು, ಉದ್ದಿಮೆವಾರು,ಏಜೆನ್ಸಿವಾರು, ಕಾಮಗಾರಿ ವಿವರಗಳೊಂದಿಗೆ ಮಾಹಿತಿ ನೀಡುವುದು) | - ಉದ್ಭವಿಸುವುದಿಲ್ಲ - |
| ಉ | ಈ ಅನುದಾನವನ್ನು ಯಾವ ಕಾಮಗಾರಿಗಳಿಗೆ ವಿನಿಯೋಗಿಸಬಹುದು ಇದರ ಸಂಬಂಧ ಸರ್ಕಾರ ಹೊರಡಿಸಿರುವ ಮಾರ್ಗಸೂಚಿಗಳೇನು? | CSR ಅನುದಾನವನ್ನು ಕಂಪನಿ ಕಾಯ್ದೆ 2013ರ ಅನುಸೂಚಿ-7ರಲ್ಲಿ ವಿವರಿಸಿರುವ ಕಾರ್ಯಕ್ರಮಗಳಿಗೆ ವಿನಿಯೋಗಿಸಬಹುದಾಗಿದೆ. CSR ಕಾರ್ಯಕ್ರಮಗಳ ನಿರ್ವಹಣೆ ಬಗ್ಗೆ ಕೇಂದ್ರ ಸರ್ಕಾರವು Companies (CSR) Rules 2014 ನ್ನು ರೂಪಿಸಿದೆ. |

ಸಾಉಇ 8 ಎಲ್ ಸಿಯು 2021

(ಜಗದೀಶ ಶೆಟ್ಟರ)

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ

ಸಾರ್ವಜನಿಕ ಉದ್ದಿಮೆಗಳ ಸಚಿವರು